# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್–803/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 12/09/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಬಿ. ರಾಘವೇಂದ್ರ ಭಟ್, ಅಧ್ಯಕ್ಷರು, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ,ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, (2) ಶ್ರೀ ಅಜಿತ್ ಶೆಟ್ಟಿ, ಕಾರ್ಯದರ್ಶಿ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, (3) ಶ್ರೀ ಪರಮೇಶ್ವರ್, ಮಧ್ಯಸ್ಥ, ಕೋಶಾಧಿಕಾರಿ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ಟಿ.ಜೆ. ಮೆಂದನ್, ಬಿನ್ ಜಬ್ಬ ಗುರಿಕರ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರು, ಮೆಂದನ್ ಎಲೆಕ್ಟ್ರಿಕಲ್ಸ್, ಕಸ್ತೂರಿ ಬಿಲ್ಡಿಂಗ್ಸ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಸಲ್ಲಿಸಿ, (1) ಶ್ರೀ ಬಿ.ರಾಘವೇಂದ್ರ ಭಟ್, ಅಧ್ಯಕ್ಷರು, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ,ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, (2) ಶ್ರೀ ಅಜಿತ್ ಶೆಟ್ಟಿ, ಕಾರ್ಯದರ್ಶಿ, ಶ್ರೀ ಸಿದ್ಧಿವಿನಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, (3) ಶ್ರೀ

ಪರಮೇಶ್ವರ್ ಮಧ್ಯಸ್ಥ, ಕೋಶಾಧಿಕಾರಿ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ತನಿಖೆ ಮಾಡಲು ಕೋರಿರುತ್ತಾರೆ. (4)ಆಯುಕ್ತರು, ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ, ಉಡುಪಿ ಜಿಲ್ಲೆ (5) ಕಾರ್ಯನಿರ್ವಾಹಕ ಅಧಿಕಾರಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿಗಳ ಇಲಾಖೆ, ಉಡುಪಿ, ಇವರನ್ನು ತನಿಖಾ ಅವಧಿಯಲ್ಲಿ ಸೇರಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಾರಾಂಶ:-

ಉಡುಪಿ ತಾಲ್ಲೂಕ್, ಉಪ್ಪೂರು ಗ್ರಾಮದ ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವಕ್ಕೆ ಊರ ಮತ್ತು ಪರ ಊರ ಭಕ್ತಾಭಿಮಾನಿಗಳಿಂದ ದೇಣಿಗೆಯನ್ನು ಸಂಗ್ರಹಿಸಲಾಗಿದ್ದು, ಸದರಿ ಹಣವನ್ನು ಪ್ರಕರಣದ ಎದುರುದಾರರು ಅಂದರೆ ಸದರಿ ದೇವಸ್ಥಾನದ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ನಿಯಮಾವಳಿಗಳ ಚೌಕಟ್ಟಿನಲ್ಲಿ ಖರ್ಚು ಮಾಡದೇ ಅವ್ಯವಹಾರ ನಡೆಸಿರುತ್ತಾರೆ. ಧಾರ್ಮಿಕ ದತ್ತಿ ಇಲಾಖೆ ಗಮನಕ್ಕೆ ತಂದಿದ್ದರೂ ಸದರಿಯವರು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ. ಲೆಕ್ಕ ಶೀರ್ಷಿಕೆಯಡಿಯಲ್ಲಿ ಖರ್ಚನ್ನು ತೋರಿಸಿದ್ದು, ಸದರಿ ಖರ್ಚುಗಳು ರೂ.1 ಲಕ್ಷಕ್ಕೂ ಮೀರಿದ ಖರ್ಚುಗಳಾಗಿರುವುದರಿಂದ ಪಾರದರ್ಶಕ ನಿಯಮಾವಳಿಗಳನ್ನು ಪಾಲಿಸಿರುವುದಿಲ್ಲ. ಟೆಂಡರ್‌ಗಳನ್ನು ಕರೆದಿರುವುದಿಲ್ಲ. ಈ ಕಾರಣಕ್ಕಾಗಿ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿ ದೂರು ಸಲ್ಲಿಸಿರುತ್ತಾರೆ.

ದೂರಿನೊಂದಿಗೆ ಸಹಾಯಕ ಆಯುಕ್ತರು ನೀಡಿದ ಹಿಂಬರಹ ಪ್ರತಿ, ಆರ್.ಟಿ.ಸಿ. ಪ್ರತಿ ಆಡಳಿತ ಮಂಡಳಿ ಸಭೆಯ ನಡಾವಳಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

3. 1 ರಿಂದ 3ನೇ ಎದುರುದಾರರ ಆಕ್ಷೇಪಣೆಗಳು :

ಶ್ರೀ ಸಿದ್ಧಿವಿನಾಯಕ ದೇವಸ್ಥಾನ, ಉಪ್ಪೂರು ದೇವಸ್ಥಾನವು "ಬಿ" ಶ್ರೇಣಿಯ ಸ್ತರದಲ್ಲಿ ಬರುವ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟ ದೇವಸ್ಥಾನವಾಗಿರುತ್ತದೆ. ಜೀರ್ಣೋದ್ಧಾರ ಕಾಮಗಾರಿಯನ್ನು ಅನಾದಿ ಕಾಲದ ಶಿಲ್ಪಶೈಲಿಯ ರೂಪದ ರೀತಿಯಲ್ಲಿ ಮಾಡಬೇಕೆಂಬ ಉದ್ದೇಶದಿಂದ ಮತ್ತು ದೇವಳದ ಒಳಭಾಗದ ಶ್ರೀ ಗಂಗಾಧರೇಶ್ವರನ ಗುಡಿಯನ್ನು ಹೊರಭಾಗದ ಈಶಾನ್ಯ ಭಾಗಕ್ಕೆ ಸ್ಥಳಾಂತರ, ಗರ್ಭಗುಡಿಯ ಎಡನಾಳಿ, ತೀರ್ಥಮಂಟಪಕ್ಕೆ ತಾಮ್ರದ ಹೊದಿಕೆ ಹಾಕಿಸಲು ಆಡಳಿತ ಮಂಡಳಿಯು ನಿರ್ಣಯಿಸಿರುತ್ತದೆ. ಆ ಬಗ್ಗೆ ಲೋಕೋಪಯೋಗಿ ಇಲಾಖೆಯು ನೀಡಿದ ಅಂದಾಜು ಖರ್ಚು–ವೆಚ್ಚದ ಮುಂಗಡ ಪತ್ರವನ್ನು ಸೂಕ್ತ ಅರ್ಜಿಯೊಂದಿಗೆ ದೇವಸ್ಥಾನದ ಪರವಾಗಿ ಸಾರ್ವಜನಿಕರಿಗೆ ಮಂಡಿಸಿ, ಒಪ್ಪಿಗೆ ಪಡೆದು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಿರುತ್ತೇವೆ. ಕಾರ್ಯಕ್ರಮದ ಬಾಬ್ತು ಊರ ಮತ್ತು ಪರವೂರ ಭಕ್ತಾಭಿಮಾನಿಗಳಿಂದ ಸಂಗ್ರಹಿಸಿದ ದೇಣಿಗೆಯಲ್ಲಿ ಸಮಿತಿಯ ಯಾರೊಬ್ಬರು ಚಿಕ್ಕಾಸು ಹಣವನ್ನು ದುರುಪಯೋಗ ಮಾಡಿರುವುದಿಲ್ಲ. ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವದ ಆಯವ್ಯಯ ಪಟ್ಟಿಯನ್ನು ಲೆಕ್ಕಪರಿಶೋಧಕರಿಂದ ಅಂತಿಮ ವರದಿಯನ್ನು ರಚಿಸಿದ್ದು, ಅಂತಿಮ ವರದಿಗೆ ಸಮಿತಿಯ ಸಂಪೂರ್ಣ ಸದಸ್ಯರ ಒಪ್ಪಿಗೆಯನ್ನು ಪಡೆಯಲಾಗಿರುತ್ತದೆ. ಸದರಿ ಲೆಕ್ಕಪರಿಶೋಧಕರ ಅಂತಿಮ ವರದಿಗೆ ಗೌರವಾಧ್ಯಕ್ಷರಾದ ಫಿರ್ಯಾದುದಾರರು ಅಂದೇ ನಡೆದ ಸಮಿತಿ ಸಭೆಯಲ್ಲಿ ಒಪ್ಪಿಗೆ ಸೂಚಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿಗೆ ಫಿರ್ಯಾದುದಾರರು ದೂರು ಸಂಖ್ಯೆ:ಎಡಿಎಂಸಿಆರ್/83/2014–15 ರಂತೆ ಇದೇ ವಿಚಾರದಲ್ಲಿ ಸುಳ್ಳು ಫಿರ್ಯಾದಿಯನ್ನು ನೀಡಿರುತ್ತಾರೆ ಮತ್ತು ಸದರಿ ಫಿರ್ಯಾದಿಯು ತನಿಖೆಗೆ ಬಾಕಿ ಇರುತ್ತದೆ.

ಫಿರ್ಯಾದುದಾರರು ಗೌರವಾಧ್ಯಕ್ಷರಾಗಿರುವುದರಿಂದ ನಮ್ಮಂತೆಯೇ ಸಮಾನ ಬಾಧ್ಯಸ್ಥರಾಗಿರುತ್ತಾರೆ. ಸಮಿತಿಯ ಒಪ್ಪಿಗೆಯ ಮೇರೆಗೆ ಸೂಕ್ತ ಕೊಟೇಷನ್, ಸೂಕ್ತ ಟೆಂಡರ್‌ನ್ನು ನಡೆಸಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

ಎದುರುದಾರರು ತಮ್ಮ ಆಕ್ಷೇಪಣೆಗಳೊಂದಿಗೆ ಸಮಿತಿಯ ನಡಾವಳಿ ಪ್ರತಿ, ಆಯವ್ಯಯ ತ:ಖ್ತೆ ಪ್ರತಿಗಳನ್ನು ಸಲ್ಲಿಸಿದ್ದು, ಜೀರ್ಣೋದ್ಧಾರ ಕಾಮಗಾರಿಗೆ ಸಂಬಂಧಪಟ್ಟ ಟೆಂಡರ್ ಪ್ರಕ್ರಿಯೆಗೆ ಸೇರಿದ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದಿಲ್ಲ.

4. ಅಪರ ಜಿಲ್ಲಾಧಿಕಾರಿ ಹಾಗೂ ಉಪ ಆಯುಕ್ತರು, ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ, ಉಡುಪಿ ಯವರು ಸಲ್ಲಿಸಿದ ವರದಿ :

ಲೆಕ್ಕ ತಪಾಸಣಾ ಸಂದರ್ಭದಲ್ಲಿ ಕಂಡುಬಂದಂತಹ ನ್ಯೂನ್ಯತೆಗಳನ್ನು ಈಕೆಳಕಂಡಂತೆ ಉಲ್ಲೇಖಿಸಿರುತ್ತಾರೆ.

- ಜೀರ್ಣೋದ್ಧಾರ ಮತ್ತು ಬ್ರಹಕಲಶೋತ್ಸವ ಸಮಿತಿ ರಚನೆಯಾಗಿದ್ದು, ಸದರಿ ಸಮಿತಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡದಿರುವುದಿಲ್ಲ.
- ಯಾವುದೇ ವಿವರಗಳನ್ನು ಸಭಾ ನಡವಳಿ ಪುಸ್ತಕದಲ್ಲಿ ಬರೆದಿರುವುದಿಲ್ಲ.
- ದೇಣಿಗೆಗಳನ್ನು ಪಡೆಯುವಾಗ ಸಮಿತಿಯ ನಿರ್ಣಯದ ಮೂಲಕ ಪಡೆಯಲಾದ ಕುರಿತು ಲಿಖಿತವಾಗಿ ಬರೆದಿರುವ ಯಾವುದೇ ದಾಖಲೆ ಇರುವುದಿಲ್ಲ ಮತ್ತು ಹೆಚ್ಚಿನ ಎಲ್ಲಾ ಪಾವತಿಗಳನ್ನು ನಗದು ರೂಪದಲ್ಲಿ ಮಾಡಲಾಗಿದೆ.
- ಶ್ರೀ ದೇವಳದ ಗಂಗಾಧರೇಶ್ವರ ಗುಡಿಯ ಕಾಮಗಾರಿಯ ಬಗ್ಗೆ ರೂ.9,30,000–00 ಅಂದಾಜು ಪಟ್ಟಿ ಮತ್ತು ನಕ್ಷೆಗೆ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೋಧನೆ ಪಡೆಯಲಾಗಿದ್ದು, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ. ಈ ಕಾಮಗಾಯ ಬಗ್ಗೆ ರೂ.20,37,269–00 ವೆಚ್ಚ ಮಾಡಿರುತ್ತಾರೆ.

- ಶ್ರೀ ದೇವಳದ ತಾಮ್ರದ ಹೊದಿಕೆ ಕಾಮಗಾರಿಯ ಬಗ್ಗೆ ರೂ.25 ಲಕ್ಷ ಅಂದಾಜು ಪಟ್ಟಿಗೆ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೋಧನೆ ಪಡೆಯಲಾಗಿದ್ದು, ಜೀರ್ಣೋದ್ಧಾರ ಸಮಿತಿಯಿಂದ ಯಾವುದೇ ವೆಚ್ಚ ಮಾಡಿರುವುದು ಕಂಡುಬರುವುದಿಲ್ಲ.
- ಶ್ರೀದೇವಳದ ಹಳೆಯ ಕಟ್ಟಡದ ಸಮುಚ್ಚಯಗಳ ದುರಸ್ತಿ ಮತ್ತು ಸುಣ್ಣ–ಬಣ್ಣಗಳ ಕಾಮಗಾರಿ ಕುರಿತಂತೆ ರೂ.3.60 ಲಕ್ಷ ಅಂದಾಜುಪಟ್ಟಿಗೆ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ದೊರೆತಿರುತ್ತದೆ. ಆದರೆ, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ. ದುರಸ್ತಿ ಮತ್ತು ನಿರ್ವಹಣೆ ಬಗ್ಗೆ ರೂ.5,37,728–00 ವೆಚ್ಚವಾಗಿರುತ್ತದೆ.
- ಶ್ರೀ ದೇವಳದ ಪರಿವಾರ ದೇವರಾದ ಬ್ರಹ್ಮಲಿಂಗೇಶ್ವರ ಮತ್ತು ಸಪರಿವಾರ ದೇವರುಗಳ ಗುಡಿ ನಿರ್ಮಾಣದ ಬಗ್ಗೆ ರೂ.7.90 ಲಕ್ಷದ ಅಂದಾಜುಪಟ್ಟಿಗೆ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಮಂಜೂರಾತಿ ಪಡೆದಿರುತ್ತಾರೆ. ಆದರೆ, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ. ಈ ಬಗ್ಗೆ ರೂ. 33 ಸಾವಿರ ವೆಚ್ಚವಾಗಿರುತ್ತದೆ.
- ಶ್ರೀ ದೇವಳದ ನೂತನ ಶಾಶ್ವತ ಯಾಗ ಮಂಟಪ ಮತ್ತು ರಥಗಾರ ನಿರ್ಮಾಣ ಕಾಮಗಾರಿ ಕುರಿತಂತೆ ರೂ.7.25 ಲಕ್ಷದ ಅಂದಾಜು ಪಟ್ಟಿಗೆ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಶಾಶ್ವತ ಯಾಗ ಮಂಟಪಕ್ಕೆ ರೂ.1.73 ಲಕ್ಷ ಮತ್ತು ರಥಗಾರದ ಬಗ್ಗೆ ರೂ.25,000–00 ವೆಚ್ಚವಾಗಿರುತ್ತದೆ. ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ.

- ದೇವಸ್ಥಾನದ ಒಳಸುತ್ತು ಪೌಳಿಯಲ್ಲಿ ಮೇಲ್ಹಾವಣಿ ಬಗ್ಗೆ ರೂ.4.75 ಲಕ್ಷದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಈ ಅಂದಾಜು ಪಟ್ಟಿಗೆ ತಾಂತ್ರಿಕ ಪರಿಶೀಲನೆ ಮತ್ತು ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ. ಈ ಬಗ್ಗೆ ರೂ.45,000–00 ವೆಚ್ಚ ಮಾಡಿರುತ್ತಾರೆ.
- ಶ್ರೀ ದೇವಳದ ಹೊರ ಪೌಳಿಯಲ್ಲಿ ಸಭಾಂಗಣ ನಿರ್ಮಾಣದ ಬಗ್ಗೆ ರೂ.9.50 ಲಕ್ಷದ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಮಂಜೂರಾತಿ ಮತ್ತು ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ. ಈ ಬಗ್ಗೆ ರೂ.7.18 ಲಕ್ಷ ವೆಚ್ಚ ಮಾಡಿರುತ್ತಾರೆ.
- ಅಲ್ಲದೇ ಕಟ್ಟಡ ಸಾಮಗ್ರಿ ಕುರಿತಂತೆ ರೂ.8,29,034–00 ಕಟ್ಟಡ ನೀಲ ನಕ್ಷೆ ರೂ.13,500–00 ಸಿಮೆಂಟ್ ರೂ.88,638–00 ಮತ್ತು ತೀರ್ಥ ಮಂಟಪ ರೂ.38,500–00 ವೆಚ್ಚ ಮಾಡಿರುತ್ತಾರೆ. ಈ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ.

ಕಾಮಗಾರಿಗಳಿಗೆ ನಿಯಮದಂತೆ ಕೊಟೇಷನ್ ಕರೆದು ಕಾಮಗಾರಿ ಕೈಗೊಂಡಿರುವುದು ಅಥವಾ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕೊಟೇಷನ್ ಕರೆದಿರುವ ಕುರಿತು ಮಾಹಿತಿ ಲಭ್ಯವಿಲ್ಲ ಮತ್ತು ಇದಕ್ಕೆ ಸಂಬಂಧಪಟ್ಟ ವೆಚ್ಚಗಳು ನಗದು ರೂಪದಲ್ಲಿ ಪಾವತಿಸಲಾಗಿರುತ್ತದೆ. ರಿಶೀದಿ ಪುಸ್ತಕದಲ್ಲಿ ದೇಣಿಗೆ ಸ್ವೀಕರಿಸಿದ ಕುರಿತು ಮಾಹಿತಿ ಲಭ್ಯವಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ಜಿಲ್ಲಾಧಿಕಾರಿಗಳ ವರದಿಯೊಂದಿಗೆ ಲೆಕ್ಕಪರಿಶೋಧನಾ ವರದಿ ಪ್ರತಿಯನ್ನು ಲಗತ್ತಿಸಿರುತ್ತಾರೆ.

ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಎಲ್ಲಾ ಆಧಾರಗಳನ್ನು ಪರಿಶೀಲಿಸಲಾಗಿರುತ್ತದೆ.

5. ಉಪ್ಪೂರ ಗ್ರಾಮದ ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವಕ್ಕೆ ದೇಣಿಗೆಯನ್ನು ಸಂಗ್ರಹಿಸಿ ದಿನಾಂಕ:18-2-2015 ರಿಂದ 22-02-2015 ರವರೆಗೆ ಕಾರ್ಯಕ್ರಮ ಆಯೋಜನೆಯಂತೆ ದೇವತಾ ಕಾರ್ಯ ಪೂರ್ಣಗೊಳಿಸಿರುತ್ತಾರೆ. ದೇವಸ್ಥಾನವು "ಬಿ" ಶ್ರೇಣಿಯಲ್ಲಿ ಬರುವ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟ ದೇವಸ್ಥಾನವಾಗಿದ್ದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮ 1997 ರ ಕಲಂ 23 ರಂತೆ ದೇವಸ್ಥಾನವನ್ನು ನೋದಣಿ ಮಾಡಿರುವುದು ಕಂಡುಬಂದಿರುತ್ತದೆ. ದೇವಸ್ಥಾನ ಜೀರ್ಣೋದ್ಧಾರ ಸಮಿತಿಗೆ 1ನೇ ಎದುರುದಾರರು ಅಧ್ಯಕ್ಷರು, 2ನೇ ಎದುರುದಾರರು ಕಾರ್ಯದರ್ಶಿ, 3ನೇ ಎದುರುದಾರರು ಕೋಶಾಧಿಕಾರಿ ಹಾಗೂ ಫಿರ್ಯಾದುದಾರರು ಗೌರವಾಧ್ಯಕ್ಷರು ಇರುತ್ತಾರೆ. ದೇವಸ್ಥಾನದ ಎಲ್ಲಾ ಹಣಕಾಸಿನ ವ್ಯವಹಾರಗಳಿಗೆ 1 ರಿಂದ 3ನೇ ಎದುರುದಾರರು ಹೊಣೆಗಾರರಾಗಿರುತ್ತಾರೆ.

6. ಜೀರ್ಣೋದ್ಧಾರ ಮತ್ತು ಬ್ರಹ್ಮ ಕಲಶೋತ್ಸವ ಸಮಿತಿಯ 2014-15 ರ ಅವಧಿಯ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧಿಸಿರುವುದು ಕಂಡುಬಂದಿರುತ್ತದೆ. ಸದರಿ ಸಮಿತಿಯ 2ನೇ ಸಭೆಯಲ್ಲಿ ಸಮಿತಿಯು ಬ್ಯಾಂಕ್ ಖಾತೆ ತೆರೆದು ಅಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ ಈ ಮೂವರಲ್ಲಿ ಯಾರಾದರೂ ಇಬ್ಬರ ಜಂಟಿ ಸಹಿಯೊಂದಿಗೆ ಎಲ್ಲಾ ಪಾವತಿಗಳನ್ನು ಚೆಕ್ ಮುಖಾಂತರ ನಿರ್ವಹಿಸುವ ನಿರ್ಣಯವನ್ನು ಕೈಗೊಂಡಿರುತ್ತಾರೆ. ದೇವಸ್ಥಾನದ ಅಭಿವೃದ್ಧಿ ಕೆಲಸಗಳಿಗೆ ಸಮಿತಿ ರಚನೆಯಾಗಿದ್ದು ಸಮಿತಿಯ ರಚನೆ ಮತ್ತು ವಿವರದ ಕುರಿತಂತೆ ಸಕ್ಷಮ ಪ್ರಾಧಿಕಾರಕ್ಕೆ ಲಿಖಿತವಾಗಿ ಮಾಹಿತಿ ಸಲ್ಲಿಸಿ ಅನುಮತಿ ಪಡೆದಿರುವುದಿಲ್ಲ ಬ್ಯಾಂಕಿನಿಂದ ಹಣವನ್ನು ಪಡೆಯುವಾಗ ಸಮಿತಿಯ ನಿರ್ಣಯದ ಮೂಲಕ ಪಡೆಯದೆ ಹೆಚ್ಚಿನ ಎಲ್ಲಾ ಪಾವತಿಗಳು ನಿಯಮ ಉಲ್ಲಂಘಿಸಿ ನಗದು ರೂಪದಲ್ಲಿ ಪಾವತಿಸಿರುವುದು ಕಂಡುಬಂದಿರುತ್ತದೆ. ಸಮಿತಿ ವತಿಯಿಂದ ಕೈಗೊಂಡಿರುವ ಕಾಮಗಾರಿಗಳಿಗೆ ಸಕ್ಷಮ

ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದಿರುವುದು ಕಂಡುಬಂದಿರುವುದಿಲ್ಲ. ಮೂಲ ರಸೀದಿಗಳು ಸಮಿತಿಯ ಕಾರ್ಯದರ್ಶಿಯವರ ಅಭಿರಕ್ಷೆಯಲ್ಲಿರಬೇಕಿದ್ದು ಮೂಲ ರಸೀದಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದೆ ಇರುವುದು ಕಂಡುಬಂದಿರುತ್ತದೆ. ನಿಯಮದಂತೆ ಸಮಿತಿ ವತಿಯಿಂದ ಕಾಮಗಾರಿ ಪಾವತಿ ಓಚರ್ ಗಳಲ್ಲಿ ರಾಜಧನದ ಲೆಕ್ಕಾಚಾರ, ಕಾರ್ಮಿಕ ಕಲ್ಯಾಣ ನಿಧಿ ವಸೂಲಿ/ಗುತ್ತಿಗೆದಾರರಿಂದ ಸಿ.ಬಿ.ಎಫ್ ಮುರಿಕೆ ಇತ್ಯಾದಿಗಳನ್ನು ಅನುಸರಿಸದೆ ಇರುವುದು ಕಂಡುಬಂದಿರುತ್ತದೆ. ಸಮಿತಿಯ ಕಾರ್ಯದರ್ಶಿಗಳು ಕಾಲಕಾಲಕ್ಕೆ ಸಮಿತಿಯ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸದೆ ಇರುವುದಾಗಿ ಲೆಕ್ಕಪರಿಶೋಧನಾ ವರದಿಯಲ್ಲಿ ನಮೂದಿಸಿರುತ್ತಾರೆ. ಕಾಮಗಾರಿಗಳ ಸಂಬಂಧ ಟೆಂಡರ್ ಕರೆದ ಬಗ್ಗೆ ದಾಖಲೆಗಳನ್ನು ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸಂಗ್ರಹವಾದ ದೇಣಿಗೆ ಮೊತ್ತವನ್ನು ರಸೀದಿ ಪುಸ್ತಕದಲ್ಲಿ ನಮೂದಿಸದೆ ಇರುವ ಕಾರಣ ನಗದು ಶಿಲ್ಕುವಿನಲ್ಲಿ ಮೊತ್ತ ನೈಜವಾಗಿರದೆ ಇರುವುದಾಗಿ ನಮೂದಿಸಿರುತ್ತಾರೆ.

7. ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ, ತೆಂಕಬೆಟ್ಟು, ಉಪ್ಪೂರು ಇದರ "ಜೀರ್ಣೋದ್ಧಾರ ಮತ್ತು ಬ್ರಹ್ಮ ಕಲಶೋತ್ಸವ ಸಮಿತಿ" ಇವರು ನಿರ್ವಹಿಸಿದ ಸಂಗ್ರಹಣೆ ಮತ್ತು ಭರಿಸುವ ವೆಚ್ಚಗಳಿಗೆ ಸಂಬಂಧಿಸಿದಂತೆ ನ್ಯೂನತೆಗಳು ಕಂಡುಬಂದಿದ್ದು ಲೆಕ್ಕ ಪರಿಶೋಧಕರು ತಮ್ಮ ವರದಿಯಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆ.

(1) ರಸೀದಿ ಸಂ. 216, 2964, 937, 1099 ಇವುಗಳನ್ನು ರದ್ದು ಮಾಡಲಾಗಿರುತ್ತದೆ. ಆದರೆ ಮೂಲ ಪ್ರತಿಗಳು ಲಭ್ಯವಿರುವುದಿಲ್ಲ.

(2) ರಸೀದಿ ಸಂ. 1719 ಸೇವಾದಾರರಿಗೆ ನೀಡಿದ್ದು ಸೇವಾ ವಿವರ, ಸೇವಾ ಮೊತ್ತ ಲಭ್ಯವಿರುವುದಿಲ್ಲ.

(3) ರಸೀದಿ ಸಂ. 2706 ಸೇವಾ ಮೊತ್ತ 50,000/- ಎಂದಿದ್ದು ನಗದು ಪುಸ್ತಕದಲ್ಲಿ 49,000/- ಎಂದು ತೆಗೆದುಕೊಳ್ಳಲಾಗಿದೆ.

(4) ರಸೀದಿ ಸಂಖ್ಯೆ: 1476-1501 ಒಟ್ಟು 26 ರಸೀದಿಗಳಿದ್ದು ಒಟ್ಟು 13,000/- ಸೇವೆ/ದೇಣಿಗೆ ಮೊತ್ತ 13,000/- ವಾಗುತ್ತದೆ. ಆದರೆ ನಗದು ಪುಸ್ತಕದಲ್ಲಿ 12,500/- ಮಾತ್ರ ತೆಗೆದುಕೊಳ್ಳಲಾಗಿದೆ.

8. ಭರಿಸುವ ವೆಚ್ಚಗಳನ್ನು ಪಾವತಿಗೆ ಸಂಬಂಧಿಸಿದ ನ್ಯೂನತೆಗಳು:-

(1) ವೋಚರ್ ಸಂಖ್ಯೆ: 080 ಗೆ ಸಂಬಂಧಪಟ್ಟಂತೆ 50/- ರೂ ಹೆಚ್ಚಿಗೆ ಪಾವತಿಯಾಗಿರುತ್ತದೆ.

(2) ಪಟ್ಟಾಭಿರಾಮ ಮೇಲಂಟರಿಗೆ ದಿನಾಂಕ: 06/02/2015 ರಂದು ಒಟ್ಟು 58,548/- ರೂ ಹಾಗೂ 11,082/- ರೂ ನಗದು ರೂಪದಲ್ಲಿ ಪಾವತಿಯಾಗಿದೆ.

(3) ಗಣೇಶ ಮಾರ್ಬಲ್ ಇವರ ಬಿಲ್ ಇರುವುದಿಲ್ಲ ವೋಚರ್ ಮೂಲಕ 10,000/- ಪಾವತಿ ಮಾಡಲಾಗಿದೆ.

(4) ವೋಚರ್ ನಂ. 201 ರಲ್ಲಿ ಲಾರಿ ಬಾಡಿಗೆ 18,900/- ಮತ್ತು 3,000/- ಎಂದು ಪ್ರತ್ಯೇಕವಾಗಿ ಬರೆಯಲಾಗಿದೆ.

(5) ಕಾರ್ಯದರ್ಶಿಯವರ ಹೆಸರಿನಲ್ಲಿ ಪ್ರಯಾಣ ಮತ್ತು ಪ್ರಿಂಟಿಂಗ್ ವೆಚ್ಚಗಳೆಂದು 8,282, 7,048, 5,000 ಎಂದು ಪಾವತಿ ಮಾಡಿರುತ್ತಾರೆ.

(6) ವೋಚರ್ ನಂ. 208 ರಿಂದ 211 ವೆಚ್ಚ 22,500/- ಇದ್ದು ಪಾವತಿ ರಸೀದಿಗಳಿರುವುದಿಲ್ಲ.

(7) ವೋಚರ್ ನಂ. 360 ರಡಿ 8,300/- ನಗದು ಪಾವತಿಯಾಗಿದೆ.

(8) ವೋಚರ್ ನಂ. 361 ಚೀಟಿಗಳಲ್ಲಿ ಬರೆದ ಮೊತ್ತಕ್ಕೆ 1,83,000/- ಪಾವತಿ ಮಾಡಲಾಗಿದೆ.

(9) ಗ್ರಾನೈಟ್ ಬಗ್ಗೆ 32,100/- ಯಾರಿಗೆ ಪಾವತಿ ಎಂಬುದರ ವಿವರ ನಮೂದಿಸಿರುವುದಿಲ್ಲ.

(10) 31/03/2016 ರ ವರ್ಷಾಂತ್ಯಕ್ಕೆ ಅಮಾನತ್ತು ಖಾತೆಯಲ್ಲಿ 31,382/– ರೂ ಜಮೆ ಇದ್ದು ವಿವರ ಲಭ್ಯವಿರುವುದಿಲ್ಲ.

(11) ವೆಚ್ಚದ ವೋಚರ್ ಗಳಲ್ಲಿ ಹಣ ಪಡೆದವರ ಮತ್ತು ನೀಡಿದವರ ಸಹಿ ಇರುವುದಿಲ್ಲ. ಬಿಲ್ಲುಗಳ ಮಾಲೀಕರಿಗೆ ಪಾವತಿ ಮಾಡದೆ ಮೂರನೇ ವ್ಯಕ್ತಿಯ ಹೆಸರಿನಲ್ಲಿ ಪಾವತಿ ಮಾಡಿರುತ್ತಾರೆ.

(12) ಜಾಹಿರಾತಿಗೆ ನಿಗಧಿಪಡಿಸಿದ ಮೊತ್ತ, ಸಂಗ್ರಹವಾದ ಒಟ್ಟು ದೇಣಿಗೆ ಮೊತ್ತ ಕುರಿತ ಮಾಹಿತಿ ಲಭ್ಯವಿರುವುದಿಲ್ಲ.

(13) ಸಮಿತಿಯ ಕೆನರಾ ಬ್ಯಾಂಕ್ ಚೆಕ್ ನಂ. 12 ರಂತೆ 1,09,889/– ಜಮೆ ಇದ್ದು, ನಗದು ಪುಸ್ತಕದಲ್ಲಿ Contra entry ಮಾಡಿ ನಮೂದಿಸಿದ್ದು ಇದರ ಪರಿಣಾಮ ಸಮಿತಿಯವರ ಕೈಯಲ್ಲಿ ನೈಜ ನಗದು 1,09,889/– ರೂ ರಷ್ಟು ಕಡಿಮೆ ಆಗುತ್ತದೆ.

(14) ಕಲಶ ಸೇವಾ ಪುಸ್ತಕ ಸಂಖ್ಯೆ 15 ರಸೀದಿ ಪುಸ್ತಕದಲ್ಲಿ ದೇಣಿಗೆ ಸ್ವೀಕರಿಸಿದ ಕುರಿತು ಮಾಹಿತಿ ನೀಡಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

9. ಸಮಿತಿಯ ಲೆಕ್ಕ ಪತ್ರಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮ–1997 ಮತ್ತು ಇದರ ನಿಯಮಗಳ ಅನುಗುಣವಾಗಿ ನಿರ್ವಹಿಸಿಲ್ಲವೆಂದು ಲೆಕ್ಕಪರಿಶೋಧಕರ ವರದಿಯಲ್ಲಿ ನಮೂದಿಸಿರುತ್ತಾರೆ. ಜಿಲ್ಲಾಧಿಕಾರಿಗಳ ವರದಿಯ ಅಂಶಗಳಿಂದ ಸಮಿತಿಯು ನಿಮಯಗಳ ಅನುಸಾರ ಕಾರ್ಯನಿರ್ವಹಿಸದಿರುವುದು ಕಂಡುಬಂದಿರುತ್ತದೆ.

10. ದೇವಸ್ಥಾನ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವ ಕಾರ್ಯಕ್ರಮಕ್ಕೆ ನಿಯಮಾನುಸಾರ ವ್ಯಯ ಮಾಡಲು ಟೆಂಡರ್ ಗಳನ್ನು ಕರೆಯದೇ ನಿಯಮಬಾಹಿರವಾಗಿ ದೇಣಿಗೆ ಪಡೆದು ಖರ್ಚು ಮಾಡಿರುವುದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮ, 1977 ಮತ್ತು ನಿಯಮಗಳ ಪ್ರಕಾರ 1 ರಿಂದ 3ನೇ

ಎದುರುದಾರರು ಕಾರ್ಯನಿರ್ವಹಿಸದೇ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದು, ತನಿಖೆಯಲ್ಲಿ ಕಂಡುಬಂದಿರುತ್ತದೆ.

11. ಸಮಿತಿಯಲ್ಲಿ ನಡೆದ ಅವ್ಯವಹಾರ ಹಾಗೂ ಅಧಿಕಾರ ದುರ್ಬಳಕೆ ಮಾಡಿದ ವಿಚಾರವಾಗಿ 1 ರಿಂದ 3ನೇ ಎದುರುದಾರರ ವಿರುದ್ಧ ಆಯುಕ್ತರು ಸದರಿ ಅಧಿನಿಯಮದ ಕಲಂ 43 ರ ರೀತ್ಯಾ ಕ್ರಮ ಜರುಗಿಸುವ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ 1 ರಿಂದ 3ನೇ ಎದುರುದಾರರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿರುವುದು ಸಮಿತಿಯ ಹಣ ದುರುಪಯೋಗಪಡಿಸಿರುವುದು ಕಂಡು ಬಂದಿರುತ್ತದೆ.

12. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ 1 ರಿಂದ 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **1ನೇ ಎದುರುದಾರರಾದ**–ಶ್ರೀ ಬಿ. ರಾಘವೇಂದ್ರ ಭಟ್, ಅಧ್ಯಕ್ಷರು, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ,ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, **2ನೇ ಎದುರುದಾರರಾದ**– ಶ್ರೀ ಅಜಿತ್ ಶೆಟ್ಟಿ, ಕಾರ್ಯದರ್ಶಿ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, **3ನೇ ಎದುರುದಾರರಾದ** ಶ್ರೀ ಪರಮೇಶ್ವರ್, ಮಧ್ಯಸ್ಥ, ಕೋಶಾಧಿಕಾರಿ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

**13.** ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/9

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**